# ಪಾಠ – 6

## ಸಂಕೇತಗಳಲ್ಲಿ ದೋಷಪರಿಹಾರ : ಭಾಗ-1

**ಮೂಲ : ಬ್ರೂಸ್. ಎನ್. ಕ್ಯಾಮರನ್. ಜೆ.ಡಿ. ಅನುವಾದ : ಪಾಸ್ಟರ್ ಚೆಲುವರಾಜು**

**ಪೀಠಿಕೆ :-** ಕಳೆದ ಭಾನುವಾರ, ನನ್ನ ಮನೆಯ ಮೇಲುಪ್ಪರಿಗೆಯಲ್ಲಿರುವ ಕುರ್ಚಿಯಲ್ಲಿ ಕುಳಿತು, ಮನೆ ಮುಂದಿರುವ ಕೊಳವನ್ನು ನೋಡುತ್ತಿದ್ದೆ. ಅದೊಂದು ಸುಂದರವಾದ ಸಂಜೆ. ಎಲ್ಲವೂ ಮೌನ. ನನ್ನ ಮನಸ್ಸು ದೇವರ ಬಗ್ಗೆಯೂ ಮತ್ತು ಆತನ ಪ್ರಪಂಚದಲ್ಲಿ ನನ್ನ ಸ್ಥಾನವನ್ನು ಕುರಿತು ಯೋಚಿಸುತ್ತಿತ್ತು. ದೇವರು ಇದ್ದಾನೆ, ಕ್ರೈಸ್ತೀಯ ಜೀವನ ಸತ್ಯವಾದದ್ದು, ಯೇಸುಸ್ವಾಮಿ ಮೆಸ್ಸೀಯ ಎಂಬೆಲ್ಲಾ ವಿಷಯಗಳನ್ನು ನಾನು ನಂಬಿದ್ದು ಏಕೆ ಎಂದು ಯೋಚಿಸುತ್ತಿದ್ದೆ. ನಮ್ಮ ಇಂದಿನ ಪಾಠವೂ ಸಹ ಈ ವಿಷಯಗಳನ್ನೇ ಕುರಿತು ಮಾತನಾಡುತ್ತಿದೆ. ದೇವರು ಇದ್ದಾನೆ ಎಂದು ನಾನು ನಂಬುವುದಕ್ಕೆ ಕಾರಣ. ಸೃಷ್ಟಿಯಲ್ಲಿರುವ ಕ್ರಮಬದ್ಧತೆ. ಸ್ವಂತ ಮನೆ ಮತ್ತು ಸ್ವಂತ ಕಾರು ಇದ್ದರೆ ಜೀವನದಲ್ಲಿ ಕ್ರಮಬದ್ಧತೆ ಇರುವುದಕ್ಕಿಂತ ಅಕ್ರಮ ಅಥವಾ ಅವ್ಯವಸ್ಥೆಯೇ ಹೆಚ್ಚಾಗಿರುವುದನ್ನು ಕಂಡಿದ್ದೇನೆ. ಸಂಕೇತಗಳ ಮೂಲಕ, ದೇವರು ಮೆಸ್ಸೀಯನನ್ನು ಮೊದಲೇ ತಿಳಿಸಿರುವುದು, ಆತನಲ್ಲಿರುವ ಕ್ರಮಬದ್ಧತೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಈ ಪ್ರಪಂಚದಲ್ಲಿರುವ ಧರ್ಮಗಳಲ್ಲಿ, ಮೂರು ದೊಡ್ಡ ಧರ್ಮಗಳು ಪರ್ಣಶಾಲೆಯ ದೇವಾರಾಧನೆಯ ಪದ್ಧತಿಗಳಲ್ಲಿ ನಂಬಿಕೆಯಿಟ್ಟಿದ್ದರೂ ಸಹ, ಕ್ರೈಸ್ತ ಧರ್ಮ ಮಾತ್ರ ಯೇಸುಸ್ವಾಮಿಯೇ ಆ ಮೆಸ್ಸೀಯನೆಂಬ ಸತ್ಯಕ್ಕೆ ಬದ್ಧವಾಗಿದೆ. ಪಾಪ ಪರಿಹಾರಕ್ಕೆ ಸಾಂಕೇತಿಕವಾಗಿದ್ದೆಲ್ಲ ಕ್ರಿಸ್ತನಲ್ಲಿ ನೆರವೇರಿರುವುದನ್ನು ಕ್ರೈಸ್ತಧರ್ಮ ನಂಬುತ್ತದೆ. ಹೀಗಾಗಿ ಕ್ರೈಸ್ತಧರ್ಮ ತಾರ್ಕಿಕ, ಅಚಲ ಹಾಗೂ ವಿವೇಕಪೂರ್ಣ ಧರ್ಮವಾಗಿದೆ. ಈ ವಿಷಯಗಳನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಲು, ಈ ವಾರದ ಪಾಠದತ್ತ ನಮ್ಮ ಗಮನ ಹರಿಸೋಣವೇ?

**ಪಾಪ ಮೂಲದ ದಾರಿ**

iii) **ಯಾಜಕಕಾಂಡ 6:2-4ನ್ನು** ಓದಿಕೊಳ್ಳಿರಿ. ಈ ವಾಕ್ಯದಲ್ಲಿ ಹೇಳಿರುವ ಪಾಪಗಳು "ದೇವ ದ್ರೋಹ"ವೇಕೆ? ಬಹುಶಃ ನೆರೆಯವನಲ್ಲಿ ಈ ವಸ್ತುಗಳ ಕೊರತೆಗಳಿದ್ದಿರಬಹುದಲ್ಲವೇ? [ಹೀಗೆ ಮಾಡುವುದು ತಪ್ಪು ಎಂದು ದೇವರೇ ಹತ್ತು ಆಜ್ಞೆಗಳಲ್ಲಿ ತಿಳಿಸಿದ್ದಾರೆ. ದೇವರ ಪ್ರಮಾಣ ಈ ಮೂಲಕ ಮುರಿದುಬಿದ್ದಿದೆ.]

iv) **ಯಾಜಕಕಾಂಡ 6:5ನ್ನು** ಓದಿಕೊಳ್ಳಿ. ಹಳೇ ಒಡಂಬಡಿಕೆಯ ವ್ಯವಸ್ಥೆಯಲ್ಲಿ ಪಾಪ ಪರಿಹಾರದ ಮೊದಲ ಹಂತವೇನು? [ದೇವರ ಆಜ್ಞೆ ಉಲ್ಲಂಘಿಸಿದ್ದರೂ, ನಾವು ಕಳೆದುಕೊಂಡದ್ದನ್ನು ಪಡೆದುಕೊಳ್ಳಬೇಕೆಂಬುದು ದೇವರ ಬಯಕೆಯಾಗಿದೆ. ಹೀಗಾಗಿ ತಪ್ಪಾಗಿ ನಡೆದುಕೊಂಡಾಗ, ನಮ್ಮ ಮೊದಲ ಕರ್ತವ್ಯ ತಪ್ಪನ್ನು ತಿದ್ದಿಕೊಳ್ಳುವುದು. ಹೀಗಾಗಿ ದೊಷಪರಿಹಾರದ ಮೊದಲ ಹಂತ: ತಪ್ಪೊಪ್ಪಿಗೆ ಮತ್ತು ತಪ್ಪನ್ನು ಸರಿಪಡಿಸುವುದು.]

v) **ಯಾಜಕಕಾಂಡ 6:6ನ್ನು** ಓದಿಕೊಳ್ಳಿ. ಈ ವಚನ "ಪ್ರಾಯಶ್ಚಿತಕ್ಕಾಗಿ" ಎಂದು ಹೇಳುವುದೇಕೆ? ಐದನೆಯ ಒಂದು ಪಾಲು ಅಥವಾ ಶೇಕಡಾ 20ನ್ನು ಈಗಾಗಲೇ ದಂಡ ಕಟ್ಟಿದ್ದೇವಲ್ಲಾ ಎಂಬುದು ನನ್ನ ಅನಿಸಿಕೆ! ಪಾಪಕ್ಕೆ ಇನ್ನೇನಲ್ಲಾ ಮಾಡಬೇಕಾಗಿದೆ? [ಯಾವ ಮನುಷ್ಯನಿಗೆ ನಾವು ಮೋಸ ಮಾಡಿದೆವೊ ಅವನಿಗೆ ಶೇಕಡಾ 20ನ್ನು ದಂಡ ಕೊಟ್ಟಾಯಿತು. ಆದಾದ ನಂತರ "ಪೂರ್ಣಾಂಗವಾದ ಟಗರು" ದೇವರಿಗೆ ಸಲ್ಲಿಸುವ ದಂಡ.]

i) ದಂಡಕ್ಕೆ ಸರಿಯಾದ ಬೆಲೆ ಟಗರು ಸರಿ, ಆದರೆ ಅದು "ಪೂರ್ಣಾಂಗ"ವಾಗಿರಬೇಕೇಕೆ? ದಂಡದ ಬೆಲೆಗೆ ಸಮವಾದ, ಆದರೆ ದೋಷವುಳ್ಳ ಟಗರನ್ನು ಕೊಲ್ಲಬಾರದೇಕೆ?

ii) ಎರಡನೇಯದಾಗಿ, ನಿಮ್ಮ ಪಾಪಕ್ಕಾಗಿ ಆ ಅಮಾಯಕ ಪ್ರಾಣಿಯನ್ನೇಕೆ ಕೊಲ್ಲಬೇಕು? ಕೆಲಸಕ್ಕೆ ಬರುವ ಯಾವದಾದರೂ ದಂಡ ಕಟ್ಟಬಾರದೆ, ಕೆಲಸಕ್ಕೆ ಬಾರದ ಈ ಹೆಣವೇಕೆ? ["ನಾನು ನಿನ್ನ ಗಾಡಿಯ ಚಕ್ರಗಳನ್ನು ಕದ್ದುಕೊಂಡಿದ್ದೆ, ಇದಕ್ಕೆ ಪರಿಹಾರವಾಗಿ ಈ ಎರಡು ಕೆಲಸಕ್ಕೆ ಬಾರದ ಬ್ಯಾಟರಿಗಳನ್ನು ತೆಗೆದುಕೋ." ಕ್ರೈಸ್ತತ್ವದ ಮೆಸ್ಸೀಯನ ಕುರಿತ ಸತ್ಯವನ್ನರಿಯದಿದ್ದರೆ, ಮೇಲೆ ಹೇಳಿದ ದೋಷಪರಿಹಾರಕ್ಕೆ ಒಪ್ಪಿಸುವ ಎರಡೂ ವಸ್ತುಗಳು ಅರ್ಥಹೀನವಾಗುತ್ತವೆ.

ಈ) **ಯಾಜಕಕಾಂಡ 6:7ನ್ನು** ಓದಿಕೊಳ್ಳಿ. ಈ ವಚನದ ಅಂತ್ಯದಲ್ಲಿ ಬರುವ ಅಂಶವನ್ನು ನಾನು ಒಂದು ಸಂಪ್ರದಾಯಿಕ ನ್ಯಾಯನಿರ್ಣಯ ವ್ಯವಸ್ಥೆ ಎಂದು ಕರೆಯುತ್ತೇನೆ. ಅಪರಾಧ ಚಟುವಟಿಕೆಗಳ ಲಾಭವನ್ನು ರಾಜ್ಯ ಸರಕಾರ ಪಡೆದುಕೊಳ್ಳುತ್ತದೆ. ಅಪರಾಧ ಮಾಡಿದವನಿಂದ ದಂಡವಸೂಲಿ ಮಾಡಿ, ನಂತರ ಆತನನ್ನು ಬಿಡುಗಡೆ ಮಾಡುತ್ತದೆ ಸ್ಥಳೀಯ ಸರಕಾರ. ಈ ದಂಡವನ್ನು ಬಳಸಿಕೊಂಡು, ರಾಜ್ಯದಲ್ಲಿನ ಶಿಸ್ತುಪಾಲನೆಯನ್ನು ಕೈಗೊಳ್ಳುತ್ತದೆ. ಈ ವಚನದಲ್ಲಿರುವ ಅಸಹಜವಾದ ಸಂಗತಿಯೇನು? [ಇಲ್ಲಿನ ಸಂಗತಿ ಸತ್ತ ಪ್ರಾಣಿಯನ್ನು ಕುರಿತದ್ದು. ಇಲ್ಲಿ ಅಪರಾಧ ಚಟುವಟಿಕೆಯನ್ನು ಮೀರಿದ ಮತ್ತೊಂದು ಸಂಗತಿಯೂ ಉಂಟು. ನಾವು ವಿಶೇಷವಾಗಿ ಇಲ್ಲಿ ಗುರುತರವಾಗಿ ಪಾಪವನ್ನು ಕುರಿತು ಮಾತನಡುತ್ತಿದ್ದೇವೆ.]

ಉ) ಈ ದೋಷಪರಿಹಾರದ ಮಾರ್ಗವನ್ನು ಕುರಿತು ಇನ್ನಷ್ಟು ಸಂಶೋಧನೆ ಮಾಡೋಣ. **ಯಾಜಕ ಕಾಂಡ 4:27–31ನ್ನು** ಓದಿಕೊಳ್ಳಿರಿ. ಪ್ರಾಣಿಯನ್ನು ಕೊಲ್ಲುವವರು ಯಾರು? [ಪಾಪಮಾಡಿದ ವ್ಯಕ್ತಿ ಪ್ರಾಣಿಯ ತಲೆಯ ಮೇಲೆ ಕೈಯಿಡುತ್ತಾನೆ ಮತ್ತು ನಂತರದಲ್ಲಿ ಅದನ್ನು ಆತನೇ ಕೊಲ್ಲುತ್ತಾನೆ.

i) ಈ ದೋಷಪರಿಹಾರದ ಬಲಿ ತಿಳಿಯದೆ ಮಾಡಿದ ಪಾಪಕ್ಕಾಗಿ ಎಂಬುದನ್ನು ದಯವಿಟ್ಟು ಗಮನಿಸಿರಿ. ಇದನ್ನು ಓದಿದಾಗ ಮುಂದೆ ತಿಳಿಯದೆ ಪಾಪಮಾಡುವ ವಿಷಯದಲ್ಲೂ ಎಚ್ಚರಿಕೆಯಿಂದಿರಬೇಕು. ಎಂದೆನಿಸುತ್ತದೆಯೇ? [ಪ್ರಾಣಿಗಳ ಕೊಲ್ಲುವುದನ್ನು ನಾನು ದ್ವೇಷಿಸುತ್ತೇನೆ. ಪಾಪಮಾಡುವುದರ ನಿರುತ್ಸಾಹಕ್ಕೆ ಇದು ಕಾರಣವಾಗುತ್ತದೆ ಎಂದು ನನಗನ್ನಿಸುತ್ತಿದೆ.]

ii) ನೀವು ಬುದ್ಧಿವಂತನ ಬಳಿ ಹೋಗಿ, "ನಾನು ಒಬ್ಬನಿಗೆ ಹಾನಿ ಮಾಡಿದ್ದೇನೆ. ಈಗ ನಾನೇನು ಮಾಡಬೇಕು?" ಎಂದು ಕೇಳಿದರೆ, ಆತ ಬಹುಶಃ" ಹೋಗಿ ಅವನಲ್ಲಿ ಕ್ಷಮೆ ಯಾಚಿಸಿ ಸಂಬಂಧವನ್ನು ಸರಿಪಡಿಸಿಕೋ, ಮತ್ತೆ ಹಾಗೆ ಮಾಡಲಿಕ್ಕೆ ಹೋಗಬೇಡ" ಎಂದು ಹೇಳಬಹುದು. ಪ್ರಾಯಶ್ಚಿತದ ಕಲ್ಪನೆಯನ್ನು ಇಲ್ಲಿ ಕಾಣುತ್ತೇವೆ. ಪ್ರಾಣಿವದೆ ನಾನು ಮತ್ತೆ ಪಾಪಮಾಡದಿರುವುದಕ್ಕೆ ಸಹಾಯಮಾಡುತ್ತದೆ. ಪಾಪಕ್ಕೆ ಪ್ರಾಯಶ್ಚಿತ ಇಷ್ಟೇನಾ? ದೋಷಪರಿಹಾರ ಎಂದರೆ – ಮುಂದೆ ಮಾಡಲಿರುವ ಪಾಪಕ್ಕೆ ನಿರುತ್ಸಾಹಪಡಿಸುವುದೇ? ಇಲ್ಲಿ ತಪ್ಪಿ ಹೋಗುತ್ತಿರುವ ಮುಖ್ಯಾಂಶವೇನು?

ಊ) **ಯಾಜಕಕಾಂಡ 17:11–12ನ್ನು** ಓದಿಕೊಳ್ಳಿ ಈ ವಾಕ್ಯಗಳಲ್ಲಿಯೂ ಮತ್ತು ಹಿಂದಿನ ವಾಕ್ಯಗಳಲ್ಲಿಯೂ ರಕ್ತವನ್ನು ದೋಷಪರಿಹಾರದಲ್ಲಿ ಹೇಗೆ ಬಳಸಬೇಕು ಎಂಬುದರ ಚರ್ಚೆ ಇರುವುದನ್ನು ನೋಡಿದ್ದೇವೆ ಈ ಚಿತ್ರಣಕ್ಕೆ ರಕ್ತ ಹೇಗೆ ಹೊಂದಿಕೊಳ್ಳುತ್ತದೆ?

iii) ರಕ್ತ ದೊಷಪರಿಹಾರ ಮಾಡುವುದು ಹೇಗೆ? **ಆದಿಕಾಂಡ 2:15–17ನ್ನು** ಓದಿಕೊಳ್ಳಿ. ಪಾಪದ ಫಲಿತಾಂಶ ಮರಣ. ಯಾಜಕ ಕಾಂಡದಲ್ಲಿ ದೇವರು ರಕ್ತ ಪ್ರಾಣಾಧಾರ ಎಂದು ಹೇಳಿದ್ದಾರೆ. ಮಾನವ–ಪಾಪ ಸಂಬಂಧವಾಗಿ ಮರಣಿಸಬೇಕಾದ ಸ್ಥಳದಲ್ಲಿ ಪ್ರಾಣಿಯ ಸಾವು ಯಾವುದೋ ಒಂದು ರೀತಿಯಲ್ಲಿ ಆ ಸ್ಥಳವನ್ನಾಕ್ರಮಿಸುತ್ತದೆ. ಮಾನವನ ಪಾಪ ಪ್ರಾಣಿಯ ರಕ್ತದಿಂದ ಪರಿಹಾರವಾಗುತ್ತದೆ. ಇದು ಪ್ರಾಯಶ್ಚಿತ ಅಥವಾ ಪಾಪದಕಡೆಗೆ ವಿಭಿನ್ನವಾದ ಕಾರ್ಯ ಪಾಪವೆಂದರೆ ದೇವರಿಗೆ ಅವಿಧೇಯರಾಗಿ ನಡೆದುಕೊಳ್ಳುವುದು ಎಂಬುದನ್ನು ನಾವು ಈಗಾಗಲೇ ಕಲಿತ್ತಿದ್ದೇವೆ. ಆತನ ಆಜ್ಞೆಯನ್ನು ಉಲ್ಲಂಘಿಸುವುದು ಪಾಪವೇ ಪಾಪದ ಫಲಿತಾಂಶ ಮರಣವೆಂದು ಆತನ ಆಜ್ಞಾ ಪ್ರಮಾಣ ಹೇಳುತ್ತದೆ.

## II. ದೋಷಪರಿಹಾರದ ಪ್ರವಾ ದನಾ ರೂಪ

(ಅ) ತಪ್ಪು ಮಾಡಿದವನೊಬ್ಬನಿಗೆ ಬುದ್ಧಿವಂತನೊಬ್ಬ ನೀಡುವ ಸಲಹೆ ಏನು ಎಂದು ಈಗಾಗಲೇ ನಾವು ನೋಡಿದ್ದೇವೆ. ಆದರೆ ಅದಕ್ಕಾಗಿ ರಕ್ತತರ್ಪಣವಾಗಬೇಕು ಎಂಬುದು ಆ ಬುದ್ಧಿವಂತನ ಆಲೋಚನೆಗೆ ಬರಲು ಸಾಧ್ಯವೇ ಇಲ್ಲ ಎಂದು ತಿಳಿದುಕೊಳ್ಳುವುದು ನಮಗೆ ಕ್ಷೇಮ ವೈಯಕ್ತಿಕ ತಪ್ಪುಗಳಿಗಾಗಿ ರಕ್ತಧಾರೆಯಾಗಬೇಕು (ಸಾಯಬೇಕು) ಎಂದು ಹೇಳುವ ಅನೇಕ ದೊಡ್ಡ ಧರ್ಮಗಳು ಈ ಪ್ರಪಂಚದಲ್ಲಿವೆಯೇ? ಈ ರೀತಿಯಾಗಿ ದೋಷಪರಿಹಾರ ಕ್ರಮವನ್ನು ನಂಬುವವರು ಅಥವಾ ಬೋಧಿಸುವವರು ಇದ್ದಾರೆಯೇ?

(ಆ) **ರೋಮ 3:22–26ನ್ನು** ಓದಿಕೊಳ್ಳಿ. ಪರ್ಣಶಾಲೆಯ ದೋಷಪರಿಹಾರಕ ವಿಧಿನಿಯಮಗಳು ಸಾಂಕೇತಿಕವಾಗಿ ಯೇಸುಸ್ವಾಮಿಯನ್ನು ಸೂಚಿಸುತ್ತವೆ ಎಂಬುದನ್ನು ಸತ್ಯವೇದ ಹೇಗೆ ನಿರೂಪಿಸುತ್ತದೆ? [ಪರ್ಣಶಲೆಯ ವಿಧಿನಿಯಮಗಳು ಒಂದು ಹೊಸ ಆಲೋಚನೆಯನ್ನು ಪರಿಚಯ ಮಾಡಿಸಿವೆ. ಅದೇನೆಂದರೆ : ಮಾನವ ತನ್ನ ಪಾಪಕ್ಕಾಗಿ, ತನ್ನ ಜೀವ ಬಲಿಕೊಡುವ ಬದಲು, ಪ್ರಾಣಿಬಲಿಯ

ರಕ್ತಧಾರೆಯಮೂಲಕ ತನ್ನನ್ನು ಬಿಡಿಸಿಕೊಳ್ಳಬಹುದು. ಪಾಪದಿಂದ ತನಗೇನಾಗುತ್ತಿತ್ತೋ ಅದರಿಂದ ತಪ್ಪಿಸಿಕೊಳ್ಳಲು, ತನ್ನ ಸ್ಥಳದಲ್ಲಿ ಪ್ರಾಣಿಯೊಂದನ್ನು ಬಲಿಕೊಟ್ಟನು.]

i) **ರೋಮ 3:25ರಲ್ಲಿ** ಈ ದೋಷಪರಿಹಾರಕದ ಆಲೋಚನೆಯಲ್ಲಿ ನೀತಿ ನಿರ್ಣಯವಿರುವುದನ್ನು ಗಮನಿಸಿರಿ. ಇಲ್ಲಿ ನೀತಿ ಇದೆಯೆಂದು ನಿಮಗನ್ನಿಸುತ್ತದೆಯೇ? ನಾನೇದರೂ ಈ ಪ್ರಾಣಿಗಳ ವಕೀಲನಾಗಿದ್ದರೆ, ಈ ವಿಧಿನಿಯಮವನ್ನು ‘‘ಅನ್ಯಾಯ’’ ಎಂದು ಬೊಬ್ಬೆಯಿಡುತ್ತಿದ್ದೆ.

(ಅ) ಯಹೂದ ಮತ ಇನ್ನೆಂದೂ ಪ್ರಾಣಿಬಲಿ ಕೊಡದು. ಏಕೆಂದರೆ ಬಲಿ ಕೊಡುತ್ತಿದ್ದ ದೇವಾಲಯ ಸಂಪೂರ್ಣ ನಾಶವಾಗಿದೆ. ಮತ್ತು ಅದರ ಪುನರ್ ನಿರ್ಮಾಣವಾಗಿಲ್ಲ. ಪಾಪಪರಿಹಾರಕ್ಕೆ ಬಹಳ ಸ್ಪಷ್ಟವಾಗಿ ಹಾಕಿಕೊಟ್ಟು ವಿಧಿವಿಧಾನಗಳನ್ನು ಮೇಲಿನ ಕಾರಣಕ್ಕಾಗಿ ನಿಲ್ಲಿಸಿರುವದು ಸರಿ ಎಂದು ನಿಮಗನ್ನಿಸುತ್ತದೆಯೇ? [**ಯಾಜಕ ಕಾಂಡ 20:24-25ನ್ನು** ಓದಿಕೊಳ್ಳಿ. ಬಲಿಕೊಡಲು ದೇವಾಲಯದ ಅವಶ್ಯವಿಲ್ಲ. ಕಲ್ಲಿನಿಂದ ಅಥವಾ ಕೆಸರಿನಿಂದ ನಿರ್ಮಾಣಮಾಡಿದ ಯಜ್ಞವೇದಿಯ ಮೇಲೆ ಬಲಿ ಅರ್ಪಿಸಬಹುದು]

(ಆ) ಹಳೆಯ ಒಡಂಬಡಿಕೆಯನ್ನು ದೇವರ ಪ್ರಕಟಣೆಯೆಂದು ನಂಬುವ ಇಸ್ಲಾಂ ಧರ್ಮ, ಪಾಪ ಪಾಪಪರಿಹಾರ ಮಾಡಿಕೊಳ್ಳುವುದಕ್ಕೆ ಬದಲು ಇನ್ನೊಬ್ಬನಿಂದ ಪಾಪಪರಿಹಾರವಾಗುವುದನ್ನು ಎದುರುನೋಡುತ್ತದೆಯೇ?

(ಇ) **1ಪೇತ್ರ 1:18-21ನ್ನು** ಓದಿಕೊಳ್ಳಿರಿ. ತಪ್ಪನ್ನು ಸರಿಪಡಿಸಲು ಮೊದಲಿಂದ ನಡೆದುಕೊಂಡ ಬಂದ ಪದ್ಧತಿಯನ್ನು ಕುರಿತು ಪೇತ್ರ ಇಲ್ಲಿ ಹೇಳುವುದೇನು? [ದಂಡ ಕಟ್ಟಿರಿ: ಬೆಳ್ಳಿ, ಬಂಗಾರ ಅಥವಾ ಹಣವೂ ಆಗಿದ್ದಿರಬಹುದು.]

i) ನಮ್ಮ ತಪ್ಪು ಸರಿಹೋಗುವುದು ಯಾವಾಗ? [ಯೇಸುಸ್ವಾಮಿಯ ರಕ್ತದಿಂದ]

ii) ಪೇತ್ರನೂ ಸಹ ನಿಷ್ಕಲಂಕ ಕುರಿಯನ್ನು ಕುರಿತು ಮಾತನಾಡುವುದನ್ನು ಗಮನಿಸಿರಿ. ಮುಖ್ಯ ಸಂಗತಿಯಲ್ಲಿ ಇದು ಅನರ್ಥವಾಗಿದೆ ಎಂದು ನಾನೀಗಾಗಲೇ ನನ್ನ ಧ್ವನಿಯೆತ್ತಿರುವುದನ್ನೂ ನೀವು ಗಮನಿಸಿದ್ದೀರಿ. ಆದರೆ ಈಗ ಇದು ಅರ್ಥಪೂರ್ಣ ಎಂದು ನಿಮಗನ್ನಿಸುತ್ತಿರುವುದೇಕೆ? ಪರಿಪೂರ್ಣಾಂಗ ಹಾಗೂ ನಿಷ್ಕಲಂಕ ಕುರಿಯೆ ಯಜ್ಞದ ಬಲಿಪಶುವಾಗಬೇಕು ಎಂದು ದೇವರು ಹೇಳಿದ್ದರ ಕಾರಣ : ಮುಂದೆ ಬರಲಿರುವ ಯೇಸುಸ್ವಾಮಿಯನ್ನು ಅದು ಸಾಂಕೇತಿಕವಾಗಿ ಪ್ರತಿನಿಧಿಸಿದ್ದು. ಯೇಸುಸ್ವಾಮಿಯರ ಜೀವನ ಪರಿಪೂರ್ಣವಾಗಿತ್ತು ಮತ್ತು ಅವರು ನಮ್ಮ ಪಾಪಪರಿಹಾರಕ್ಕಾಗಿ ದೋಷಪರಿಹಾರಕ ಯಜ್ಞದ ಕುರಿಯಾಗಿ ಸಾಯಲು ಸಿದ್ಧರಾಗಿದ್ದರು.]

iii) ಇಸ್ರಾಯೇಲ್ಯರ ಜೊತೆ ಸಾಗುವಾಗ ದೇವರು ಈ ಪರ್ಣಶಾಲೆಯ ವಿಧಿನಿಯಮಗಳನ್ನು ಯೋಜಿಸಿದರೇ? [ಇಲ್ಲ. ಈ ಭೂಮಿಯನ್ನು ಸೃಷ್ಟಿಸುವ

ಪೂರ್ವದಲ್ಲೇ ದೇವರು ಈ ಯೋಜನೆಯನ್ನು ಹಾಕಿಕೊಂಡಿದ್ದರೆಂದು ಮೇಲಿನ ವಚನ ನಮಗೆ ತಿಳಿಸಿಕೊಡುತ್ತದೆ. ಮಾನವರ ರಕ್ಷಣೆಗಾಗಿ ಹಾಕಿಕೊಂಡಿದ್ದ ಈ ಯೋಜನೆ ತಕ್ಕಕಾಲದಲ್ಲಿ ನೆರವೇರುವ ತನಕ, ಆ ಸ್ಥಳದಲ್ಲಿ ಪರ್ಣಶಾಲೆಯ ವಿಧಿನಿಯಮಗಳ ವ್ಯವಸ್ಥೆಯನ್ನು ಅಳವಡಿಸಿದ್ದರು. ಮುಂದೆ ನಡೆಯುವ ಸಂಗತಿಗಳನ್ನು ನಮಗೆ ಬೋಧಿಸಲು, ಇವು ಸಾಂಕೇತಿಕ ರೂಪ ಪಡೆದುಕೊಂಡಿದ್ದವು.]

iv) ಪಾಪ ಪರಿಹಾರದ ಈ ವ್ಯವಸ್ಥೆ ಪ್ರಾಣಿಗಳೊಂದಿಗೆ ಮುಗಿದಿದ್ದರೆ ಸಾಕಾಗಿರಲಿಲ್ಲವೆ? ಯೇಸುಸ್ವಾಮಿ ಇದಕ್ಕಾಗಿ ಯಾಕೆ ಸಾಯಬೇಕಾಗಿತ್ತು? ನಾನು ಒಂದು ಸಮಯ ದೇವರಾಗಿದ್ದರೆ, ಪಾಪಪರಿಹಾರಕ್ಕೆ ಘಾರಂ ಪ್ರಾಣಿಗಳನ್ನು ಬಲಿಕೊಡುತಿದ್ದೇನೆ ಹೊರತು ನನ್ನ ಮಗನಲ್ಲ! [ತಾರ್ಕಿಕವಾಗಿ ಇದನ್ನು ಗ್ರಹಿಸುವದು ನನಗಿನ್ನೂ ಕಷ್ಟವಾಗಿದೆ. ಪ್ಯಾಟ್ರಿಕ್ ಎಂಬ ನನ್ನ ತಂದೆಯ ಸ್ನೇಹಿತರೊಬ್ಬರು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯಮಾಡಿದರು. ಮರಣಶಿಕ್ಷೆಗೆ ಅರ್ಹವಾದ ಅಪರಾಧವೊಂದನ್ನು ಮಾಡಿದ ನಾನು, ಕೋರ್ಟಿಗೆ ಹೋದಾಗ ನನ್ನ ಬದಲು ನನ್ನ ನಾಯಿಯೋ ಅಥವಾ ಯಾವುದಾದರು ಒಂದು ಪ್ರಾಣಿಯನ್ನು ಸಾಯಲಿಕ್ಕೆ ಒಪ್ಪಿಸಲಾಗದು... ಅಷ್ಟೇ ಯಾಕೆ ನನ್ನ ಕುಟುಂಬದಲ್ಲಿ ಯಾರಾದರೂ ನನ್ನ ಬದಲಿಗೆ ಸಾಯುತ್ತೇನೆ ಎಂದು ಮುಂದೆಬಂದರೂ ಕೋರ್ಟು ಒಪ್ಪಿಕೊಳ್ಳದು. ಡಿಮ್ಯಾಂಡ್ ಮಾಡುತ್ತದೆ. ಆದಾಮ ಮತ್ತು ಹವ್ವಳು ಪಾಪ ಮಾಡಿದಾಗ, ನಾವೆಲ್ಲರೂ ಸಾಮೂಹಿವಾಗಿ ಆ ಪಾಪಕ್ಕೆ ಒಳಗಾಗಿದ್ದೇವೆ. ನಾವು ಕ್ರೈಸ್ತರಾದಾಗ, ನಾವು "ಕ್ರಿಸ್ತ"ನವರಾಗುತ್ತೇವೆ. ಯೇಸುಸ್ವಾಮಿ ಎರಡನೇ ಆದಾಮ ನಮ್ಮ ಸಲುವಾಗಿ ಜೀವಿಸಿದ್ದು, ಮಡಿದ ಮತ್ತು ಪುನರುತ್ಥಾನಗೊಂಡ ಯೇಸುಸ್ವಾಮಿಯ ಒಂದು ಭಾಗವಾಗಿಬಿಡುತ್ತೇವೆ. ಹೀಗಾಗಿ ಯೇಸುಸ್ವಾಮಿ ಮರಣಿಸಿದಾಗ, ನಾವು ಮರಣಿಸುತ್ತೇವೆ. ಈ ವಿಷಯಗಳನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು **ರೋಮ 5:12-19ನ್ನು** ಧ್ಯಾನಮಾಡಿರಿ.]

## III. ಪ್ರಾಯೋಗಿಕ ಜೀವನ

ಅ) ಯೇಸುಸ್ವಾಮಿ ನಮ್ಮ ದೋಷ ಪರಿಹಾರಕ್ಕಾಗಿ ಯಜ್ಞದ ಪರಿಯಾಗಿ ಬೆಲೆ ಕಟ್ಟಿರುವುದು ನಾವು ಪಾಪಮಾಡುವುದಕ್ಕೆ ಸ್ವಾತಂತ್ರ್ಯ ನೀಡಿದೆಯೇ? [**ರೋಮ 6:1-2ನ್ನು** ಓದಿಕೊಳ್ಳಿ. ನಾವು ಯೇಸುಸ್ವಾಮಿಯೊಂದಿಗೆ ಸಾಯುವಾಗ, ನಾವು ನಮ್ಮ ಪಾಪಕ್ಕೆ ಸಾಯುತ್ತೇವೆ. ನೀವು ಯೇಸುಸ್ವಾಮಿಯೊಂದಿಗೆ ಜೀವಿಸುವಾಗ, ಪಾಪರಹಿತರಾಗಿರಲು ಪ್ರಯತ್ನಿಸುತ್ತೀರಿ.]

i) ಒಂದು ಪ್ರಾಣಿಯನ್ನು ಕೊಲ್ಲುವಿಕೆ ನೀವು ಪಾಪಮಾಡುವುದನ್ನು ನಿರುತ್ಸಾಹಿಪಡಿಸುವುದಾದರೆ, ಯೇಸುಸ್ವಾಮಿಯವರನ್ನು ಕೊಲ್ಲುವುದನ್ನು ಕುರಿತು ನಿವೇನು ಹೇಳುತ್ತೀರಿ?

ಆ) **ಕೀರ್ತನೆ 51:3–4ನ್ನು** ಓದಿಕೊಳ್ಳಿ. ಇದು ಯಾವ ಅಂಶವನ್ನು ವಿಜ್ರಂಭಿಸಿದೆ? [ತಪ್ಪಾಗಿ ನಡೆದುಕೊಳ್ಳುವದು ತನಗೆ ವಿರುದ್ಧವಾಗಿ ಪಾಪಮಾಡುದೆಂದು ದೇವರು ಹೇಳಿದ್ದಾರೆ.

ಇ) **ಯಾಕೋಬ 5:13–16ನ್ನು** ಓದಿಕೊಳ್ಳಿ. ನಮ್ಮ ಪಾಪ ಪರಿಹಾರವಾಗಬೇಕಾದರೆ, ಮತ್ತೊಬ್ಬ ವಿಶ್ವಾಸಿಯೊಂದಿಗೆ ಪಾಪೋಪ್ಪಿಗೆ ಮಾಡಬೇಕೆಂದೇ ಯಾಕೋಬ ಇಲ್ಲಿ ಹೇಳುತ್ತಿರುವುದು. ನಾವು ದೇವರ ನಿಯಮಗಳನ್ನು ಉಲ್ಲಂಘಿಸಿದಾಗ, ದೇವರಿಗೆ ವಿರುದ್ಧವಾಗಿ ಪಾಪಮಾಡಿದೆವು ಎಂದು ಹೇಳುತ್ತೇವೆಲ್ಲಾ ಅದು ಈ ವಾಕ್ಯಕ್ಕೆ ಹೇಗೆ ಹೊಂದಾಣಿಕೆಯಾಗುತ್ತದೆ. ದೇವರ ವಿಶ್ವಾಸಿಗಳು ಪಾಪಪರಿಹಾರಕ್ಕೆ ಒಬ್ಬರಿಗೊಬ್ಬರು ಮಾರ್ಗದರ್ಶನ ಮಾಡಿಕೊಳ್ಳುತ್ತಾರೆ. ಎನ್ನುವ ಅರ್ಥದಲ್ಲಿ ಯಾಕೋಬ ಈ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡಿದಂತಿದೆ. ಒಬ್ಬ ವಿಶ್ವಾಸಿಯ ಬಳಿ ನೀವು ನಿಮ್ಮ ಸಮಸ್ಯೆಯನ್ನು ಹೇಳಿಕೊಂಡಾಗ, ಅವರು ಆ ಸಮಸ್ಯೆ ಬಗೆಹರಿಸಿಕೊಳ್ಳಲು ದಾರಿತೋರಿಸಬಹುದು; ಪ್ರೋತ್ಸಾಹ ನೀಡಬಹುದು. ಮತ್ತು ಸಲಹೆ ನೀಡಬಹುದು. ಇಂಥಹ ಕಾರ್ಯಗಳು ನೀವು ಮಾಡಬಹುದಾಗಿದ್ದ ಪಾಪವನ್ನು ಮಾಡದಂತೆ ತಡೆಯಬಹುದು. ಕೆಲವರು ಇದನ್ನು "ಲೆಖ್ಖಚಾರಹಾಕುವ ಪಾಲುದಾರ" ಎಂದು ಕರೆಯವುದುಂಟು.]

ಈ) ಸ್ನೇಹಿತನೇ, ಕ್ರೈಸ್ತಧರ್ಮ, ಚಿಂತರಕರ ಧರ್ಮ ನೀವು ಹಳೆಯ ಒಡಂಬಡಿಕೆಯನ್ನು ದೇವರ ಪ್ರಕಟಣೆಯೆಂದು ಅಂಗೀಕರಿಸುವುದಾದರೆ, ರಕ್ತಧಾರೆಯಿಂದ ದೋಷಪರಿಹಾರ ಮಾಡುತ್ತಿದ್ದ ವಿಧಿನಿಯಮಗಳು, ನಮ್ಮ ಪಾಪಗಳಗಾಗಿ ರಕ್ತ ಸುರಿಸಿದ ಮೆಸ್ಸೀಯನ ಬರುವಿಕೆಯನ್ನು ಸೂಚಿಸುತ್ತಿದ್ದವು ಎಂಬುದನ್ನೂ ನಂಬುತ್ತಾರೆ. ಕ್ರೈಸ್ತಧರ್ಮ ಮಾತ್ರ ಇಲ್ಲಿರುವ ತಾರ್ಕಿಕ ನಂಟನ್ನು ಅಂಗೀಕರಿಸಿಕೊಂಡಿದೆ. ಯೇಸುಸ್ವಾಮಿ ನಿಮಗಾಗಿ ಏನು ಮಾಡಿದ್ದಾರೋ ಅದನ್ನು ಆತ್ಮವಿಶ್ವಾಸದಿಂದ ನಂಬುತ್ತೀರಾ? ಯೇಸುಸ್ವಾಮಿ ನನ್ನ ಪಾಪಗಳಗಾಗಿ ಮಡಿದರೆಂದು ನಂಬಿ ಬಾಳುವ ಜೀವನವನ್ನು ಜೀವಿಸಿ ತೋರಿಸುವಿರಾ?

## IV. ಮುಂದಿನ ವಾರ : ಸಂಕೇತಗಳಲ್ಲಿ ದೋಷಪರಿಹಾರ ಭಾಗ –2